ಬೇಡುವಿನ ಬಸುರಿ ಇದ್ದಾಗ ಚೆಣ್ಣುಗೆ ಮಗು ಹುಟ್ಟಿದ ಮೇಲೆ ಅದು ಮುಂಡಕನ ಓಲೆ ಹಸೆಯ ಮೇಲೆ ಮನಿಕಂಬಂಗೆ ಆಯ್ಲಿ ಅಂತ ಆಸೆ ಆಗಿತ್ತು. ಈಸೂರ ಬಸುರಿ ಹೆಂಗಸಿನ ಆಸೆ ಈಡೇರಿಸಬೇಕೆಂದು ಜನ ಹೆಚ್ಚು ತಿರುಗಾಡದ ಕಡುಕೆರೆಯ ಬದಿಗೆ ಹೊರಟ. ಅವನೊಟ್ಟಿಗೆ ಸ್ಯಾಸ ಬಚ್ಚ ಹೊರಟರು. 'ಕಡುಕೆರಿಯನ್ನ ದೇವತೆಗಳು ಕಟ್ಟದಂಬ್ರ್ ನಮ್ ಪೈಕಿಯರ್ ಮುಟ್ಲಕ್ಕ ಬಾವ?' ಸ್ಯಾಸ ಕೇಳಿದ. 'ಕಡುಕೆರಿ ನಡೂಗ್ ಒಂದ್ ಬಾಮಿ ಇತ್ತಂಬ್ರ್ ಅದ್ರಾಗೆಯ್ಡ್ ಚಿನ್ನದ ಮೀನಿತ್ತಂಬ್ರ್! ಹಿಡೂಕ್ ಆತ್ತಾ ಕಾಂಬ ಈಸೂರಣ್ಣ?' ಬಚ್ಚ ಕೇಂಡ. 'ಅಲ್ಲ ಬಾವ ದೇವತೆಗಳ್ ಅಷ್ಟಕ ದಡ್ಡ್ ಕೆರಿ ಮಣ್ಣ್ ಹೊತ್ತ್ ಹಾಕಿಪ್ರಾ! ಸೊಂಟ ಬಿದ್ದ್ ಹ್ವಾತಿಲ್ಯಾ ಆ ನಮ್ನಿ ಮಣ್ಣ್ ಹೊತ್ರೆ?' ಈಸೂರ ಇಬ್ರಿಗೂ ಕೇಂಡ. 'ಈ ಕೆರಿ ಕಟ್ವತಿಗೆ ಮಣ್ಣ್ ಹೊತ್ತ್ ಸೊಂಟ ಬಿದ್ದ್ ಹೋಯಿ ಇನ್ನೂ ಏಳುಕಾಯಿಲ್ಲ ಕಾಣಿ ದೇವತಿಗಳಿಗೆ' ಸ್ಯಾಸ ಹೇಳಿದ ಮಾತಿಗೆ ಇಬ್ಬರೂ ನಿಂತು ತಿರ್ಗಿ ಕೇಳಿದರು. 'ನಿಮ್ಗ್ ಹ್ಯಾಂಗ್ ಗುತ್ತಾಯ್ತ್ ಬಾವ?'

'ಹ್ಯಾಂಗೆ ಅಂದ್ರೆ, ನಾವ್ ಎಷ್ಟ್ ಕಷ್ಟದಂಗೆ ಕರದ್ರೂ ಒಂದಿನವೂ ಬಂದಿಲ್ಲ ಕಾಣಿ. ನೆಡುಕಾತಿಲ್ಲ ಅವಕ್ಕೆ' ಅಂದೇಳಿ ಸ್ಯಾಸ ಹೇಳಿದ್ದೇ ಮೂರು ಜನವೂ ಗಟ್ಟೆ ನೆಗಿಯಾಡಿದರು. ಅವರು ನೆಗಿಯಾಡಿದ ಜೋರಿಗೆ ಅವರು ನಡೆಯುತ್ತಿದ್ದ ಕಾಲುದಾರಿಯ ಆಚೀಚೆಯ ಹಳು, ಗುತ್ತಿ ಮುಂಡುಗಳೆಲ್ಲ ಅಲುಗಾಡಿ ಯಾವುದೋ ಹಳುವಿನೊಳಗೆ ಮಲಗಿದ್ದ ಮೊಲವೊಂದು ಬೆದರಿ ಪಟ್ಟ ಹಾರಿಬಿಟ್ಟಿತ್ತು. ಆ ಸುಳಿವು ಅರಿತ ಬಚ್ಚ ನುಗ್ಗಿ ಮೊಲದ ಕೆಮಿಗೆಂಡಿ ಹಿಡಿದು ರಪ್ಪ ನೆಲಕ್ಕೆ ಬಡಿದ. ಒಂದು ಗಳಿಗೆಯಲ್ಲಿ ಮೊಲ ಗಡಗಡ ನಡುಗಿ ಮತ್ತೆ ಸುಮ್ಮನಾಯಿತು. ಮೊಲವನ್ನು ಸೊಂಟದಲ್ಲಿದ್ದ ಚೀಲಕ್ಕೆ ಹಾಕಿ ಮುಂದೆ ನಡೆದರು. 'ಬಾವ, ನೀವ್ ಬಾರಿ ಕುಳ ಮರ್ರೆ! ಅಂತಾ ಚುರ್ಕಿನ ಮೊಲ ಹಿಡ್ದ್ ಬಡ್ದ್ ಬಿಟ್ರಿಯಲೆ. ಇವತ್ತೊಂದ್ ಗಡ್ಜ್ ತಾಳ್ಳ್ ಆಯ್ತ್' ಈಸೂರ ಬಾವ ಸ್ಯಾಸನನ್ನು ಹೊಗಳುತ್ತಾ ಅವರು ಕಡುಕೆರೆಯ ದಂಡೆಗೆ ಬಂದರು.

'ಬಾವ ಒಂದ್ ಹೇಲ್ ಬಂದಂಗಿತ್ತ್. ಕಡುಕೆರಿಯಾಗೆ ಕೂದಿ ತೊಳಿಲಕ್ಕಾ?' ಬಚ್ಚ ಈಸೂರನಿಗೆ ಕೇಳಿದ. ಮನೆಯ ನೆಲ ವರೆಯುವುದಕ್ಕಾಯ್ತು ಅಂತ ಕೆರೆಯ ಬದಿಯಲ್ಲಿದ್ದ ಉರುಟುರುಟು ಹೊಳಪಿನ ಕಲ್ಲು ಹೆಕ್ಕಿಕೊಳ್ಳುತ್ತಿದ್ದ ಈಸೂರು, ಸ್ಯಾಸ ತಿರ್ಗಿ ಕಂಡ್ರೆ... ಎಂತಾ ಕಾಂಬುದು. ಬಚ್ಚ ಹೇಲೂಕೆ ಕೂತವ ಏಳುವತಿಗೆ ಆಯ ತಪ್ಪಿ ಹಸೀ ಹೇಲ್ ಮೇಲೆ ಬಿದ್ದು ರಾಡಿ ಮಾಡ್ಕಂಡಿದ್ದ. 'ಹೇಲೂಕ್ ಹ್ವಾಪನಿಗೂ ಹೆಣ್ತಿ ಮನಿಗ್ ಹ್ವಾಪನಿಗೂ ನಾಚ್ಕಿ ಇಲ್ಲ ಅಂಬ್ರ್ ಕಾಣಿ ಬಾವ' ಸ್ಯಾಸನ ಗಾದೆಗೆ ಮತ್ತೆ ನೆಗಿಯಾಡಿದರು. ಇಬ್ರೂ ನೆಗಿ ಆಡಿ ಆಡಿ ಕಡೆಗೆ ಸಮಾಧಾನ ಮಾಡಿಕೊಂಡ ಈಸೂರ 'ಕೆರಿ ಕೆಳಬದಿಯಂಗೆ ಬತ್ತ ಬೆಳಿತ್ರ್. ತೊಳಿನಿ ಬಾವ ಗೆದ್ದಿಗ್ ನಿಮ್ದೂ ಒಂದ್ ನಲು ಆಯ್ಲಿ' ಅಂದ್ಕ ಮತ್ತೆ



ನೆಗಿಯಾಡಿದ. ಬಚ್ಚ ಕೆರೆಯಲ್ಲಿ ಕೂದಿ, ಪಾಣಿಪಂಜಿ ಎಲ್ಲಾ ತೊಳ್ಕಂಡ. ಮೂರೂ ಜನವೂ ಒಂದೊಂದು ದೊಡ್ಡ ಹೊರೆಯಾಗುವಷ್ಟು ಮುಂಡಕನ ಓಲೆ ಕಡ್ಕಂಡು ಬಿಡಾರಕ್ಕೆ ಬಂದು ಹೇಲಿನ ಕತೆ ಹೇಳಿ ಹೇಳಿ ನೆಗಿಯಾಡಿದ್ದರು.

ಮೊಲದ ಮಾಂಸ ಬಸುರಿ ಚೆಣ್ಣುವಿನ ಬಾಯ ತೊಡುವನ್ನು ಹೆಚ್ಚು ಮಾಡಿತ್ತು. ಅದಾದ ಒಂದು ವಾರ ಗಂಡಸರ ಮೊಲದ ಬೇಟೆ ನಡೆದಿತ್ತು. ಸಿಕ್ಕಿದ್ದು ಮಾತ್ರ ಒಂದೆ. ಕರ್ಚು ಮತ್ತೆ ಪಾರೋತಿ ಓಲೆಯನ್ನು ಚಂದ ಬಿಸಿಲಿಗೆ ಒಣಗಿಸಿ ಹದ ಮಾಡಿದ್ದರು. ಬಸುರಿ ಚಣ್ಣುಗೆ